



ಒಂದು ಸಂಜೆ ಶಿಚರಿ ಖೋಜುನ್ ಎಂಬ ಜೆನ್ ಗುರುವು ಒಂದು ಗ್ರಂಥವನ್ನು ಅಧ್ಯಯನ ಮಾಡುತ್ತ ಕುಳಿತಿದ್ದನು. ಆಗ ಹರಿತವಾದ ಕತ್ತಿಯೊಂದನ್ನು ಝಳಪಿಸುತ್ತ, ಒಬ್ಬ ಕಳ್ಳ ಮನೆಯೊಳಕ್ಕೆ ನುಗ್ಗಿದ. “ಹಣ ಕೊಡುವೆಯೋ ಅಥವಾ ನಿನ್ನ ಪ್ರಾಣ ತೆಗೆಯಲೋ?” ಎಂದು ಆ ಕಳ್ಳನು ಗುರುವನ್ನು ಬೆದರಿಸಿದನು.

ಗುರು ತಾನು ಓದುತ್ತಿದ್ದ ಪುಸ್ತಕದಿಂದ ಕಣ್ಣನ್ನು ಎತ್ತದೆ ಶಾಂತವಾಗಿ ಉತ್ತರವಿತ್ತನು: “ನನಗೆ ತೊಂದರೆ ಕೊಡಬೇಡ. ಅದೋ ನೋಡು, ಪೆಟ್ಟಿಗೆಯಲ್ಲಿರುವ ಹಣವನ್ನು ತೆಗೆದುಕೊಂಡು ಹೋಗು.” ಹೀಗೆ ಹೇಳಿ ಮತ್ತೆ ಅಧ್ಯಯನವನ್ನು ಮುಂದುವರಿಸಿದ. ಸ್ವಲ್ಪಹೊತ್ತಿನ ಬಳಿಕ ಕಳ್ಳನೆಡೆಗೆ ತಿರುಗಿ ಗುರು ಹೀಗೆ ಹೇಳಿದ: “ಎಲ್ಲ ಹಣವನ್ನೂ ತೆಗೆದುಕೊಳ್ಳಬೇಡ. ನಾಳೆ ತೆರಿಗೆ ಕಟ್ಟಬೇಕು. ಸ್ವಲ್ಪ ಹಣವಿಡು.”

ಕಳ್ಳ ಎಷ್ಟು ಸಾಧ್ಯವೋ ಅಷ್ಟನ್ನೂ ದೋಚಿಕೊಂಡು,– ಹೊರಡಲು ತಯಾರಾದ. “ಯಾರಾದರೂ ಬಹುಮಾನ ನೀಡಿದಾಗ ಕೃತಜ್ಞತೆಯನ್ನು ಅರ್ಪಿಸಬೇಕಲ್ಲವೇ?!” ಎಂದು ಕುಳಿತಿದ್ದ ಸ್ಥಳದಿಂದಲೇ ಕೇಳಿದ ಜೆನ್ ಗುರು. ಕಳ್ಳ ಕೃತಜ್ಞತೆಯನ್ನು ಅರ್ಪಿಸಿ ಅಲ್ಲಿಂದ ಕಾಲ್ತೆಗೆದ.

ಕೆಲವು ದಿನಗಳ ನಂತರ ಆ ಕಳ್ಳ ಸಿಕ್ಕಿಬಿದ್ದ. ಆತನನ್ನು ನ್ಯಾಯಾಧೀಶರ ಮುಂದೆ ನಿಲ್ಲಿಸಲಾಯಿತು. ಜೆನ್ ಗುರುವನ್ನೂ ಸಾಕ್ಷಿಗಾಗಿ ಕರೆಯಲಾಯಿತು. ಆಗ ಅವನು ಹೀಗೆ ಸಾಕ್ಷ್ಯ ನೀಡಿದ: “ನನಗಂತೂ ಇವನು ಕಳ್ಳನೆಂದು ತೋರುವುದಿಲ್ಲ. ಏಕೆಂದರೆ ಹಣ ಕೊಟ್ಟದ್ದು ನಾನೇ. ಅದಲ್ಲದೆ ಅವನು ನನಗೆ ಕೃತಜ್ಞತೆಯನ್ನು ಬೇರೆ ಅರ್ಪಿಸಿದ್ದಾನೆ.”

ಆದರೂ ಕಳ್ಳನಿಗೆ ಸ್ವಲ್ಪ ಕಾಲದ ಸೆರೆಮನೆಯ ಶಿಕ್ಷೆ ನೀಡಲಾಯಿತು. ಆ ಅವಧಿ ಮುಗಿದ ನಂತರ ಆ ಕಳ್ಳ ಜೆನ್ ಗುರುವಿನ ಬಳಿಗೆ

## ಸ್ಪರ್ಶಮಣಿಗಿಂತ ಅಮೂಲ್ಯವಾದುದು ಯಾವುದು?

ಒಬ್ಬರು ಮಹಾತ್ಮರು ನದಿಯ ದಂಡೆಯ ಮೇಲೆ ಕುಳಿತು, ಅದರ ತೆರೆಗಳನ್ನೇ ನೋಡುತ್ತಿದ್ದರು. ಆಗ ಅವರ ಬಳಿ ಒಬ್ಬ ಬಡವ ಬಂದು ಹೀಗೆ ಪ್ರಾರ್ಥಿಸಿದ: “ಮಹಾತ್ಮರೆ, ನನಗೆ ಹಣದ ಅಭಾವವಿದೆ. ಭಿಕ್ಷೆ ಬೇಡಿ ಜೀವಿಸುತ್ತಿದ್ದೇನೆ. ನನ್ನ ಹೆಂಡತಿ, ಮಕ್ಕಳು ಹಸಿವೆಯಿಂದ ನರಳುತ್ತಿದ್ದಾರೆ. ನನ್ನ ಜೀವನ ಅತ್ಯಂತ ದುಃಖಮಯವಾಗಿದೆ. ನೀವು ಕೃಪಾದೃಷ್ಟಿ ಬೀರಿದರೆ, ನನ್ನ ಪರಿಸ್ಥಿತಿ ಸುಧಾರಿಸಬಹುದು.” ಮಹಾತ್ಮರು ಸ್ನೇಹಭಾವದಿಂದ ಪ್ರಶ್ನಿಸಿದರು, “ನಾನು ನಿನಗೆ ಹೇಗೆ ತಾನೆ ಸಹಾಯ ಮಾಡಲಪ್ಪಾ?” ಆ ಬಡವ ಹೇಳಿದ, “ತಾವು ನನಗೆ ಸ್ವಲ್ಪ ಹಣದ ವ್ಯವಸ್ಥೆ ಮಾಡಿರಿ.” ಅದಕ್ಕೆ ಮಹಾತ್ಮರು ಹೀಗೆ ಹೇಳಿದರು: “ನನ್ನ ಹತ್ತಿರ ಹಣವಿಲ್ಲ. ಆದರೆ ನದಿಯ ಆಚೆಯ ದಂಡೆಯ ಮೇಲೆ ಇರುವ ಮರಳಿನ ರಾಶಿಯನ್ನು ಕೆದಕಿ ನೋಡು. ನಿನ್ನ ಅದೃಷ್ಟ ಖುಲಾಯಿಸಬಹುದು. ಅಲ್ಲಿ ನಾನು ಒಂದು ಸ್ಪರ್ಶಮಣಿಯನ್ನು ನೆನ್ನೆ ತಾನೆ ನೋಡಿದೆ.” ಆ ದರಿದ್ರ ವ್ಯಕ್ತಿಗೆ ತುಂಬ ಸಂತೋಷವಾಯಿತು, ಮಹಾತ್ಮರು ಹೇಳಿದ ಹಾಗೆಯೇ ಮಾಡಿದ. ಅವನಿಗೆ ಸ್ಪರ್ಶಮಣಿ ಸಿಕ್ಕಿಯೂ ಬಿಟ್ಟಿತು. ಅವನ ಹತ್ತಿರ ಇದ್ದ ಕೋಲಿಗೆ ಒಂದು ಕಬ್ಬಿಣದ ಹಿಡಿ ಇತ್ತು. ಅದನ್ನು ಸ್ಪರ್ಶಮಣಿಗೆ ಸೋಕಿಸಿದೊಡನೆ ಅದು ಬಂಗಾರವಾಗಿ ಮಾರ್ಪಟ್ಟಿತು. ಅವನ ಆನಂದಕ್ಕೆ ಮಿತಿಯೇ ಇಲ್ಲ. ಅಲ್ಲೇ ಕುಣಿದಾಡಿದ ಅವನು.

ಸ್ವಲ್ಪಕಾಲದ ನಂತರ ಅವನಿಗೆ ಒಂದು ಯೋಚನೆ ಬಂತು: “ಇಂಥ ಅಮೂಲ್ಯವಾದ ಸ್ಪರ್ಶಮಣಿಯನ್ನು ವ್ಯರ್ಥವೆಂದು ಆ ಮಹಾತ್ಮರು ಏಕೆ ಪರಿಗಣಿಸಿದರು?” ಅವರ ಬಳಿ ಬಂದು ಕೇಳಿದ: “ಮಹಾತ್ಮರೇ, ನಿಜಕ್ಕೂ ನೀವು ಕರುಣಾಮಯಿಗಳು. ಈ ಸಲ ನಾನು ನಿಮ್ಮಿಂದ ಏನನ್ನೂ ಕೇಳಲು ಬಂದಿಲ್ಲ. ಆದರೆ ಒಂದು ವಿಚಾರವನ್ನು ಮಾತ್ರ ದಯವಿಟ್ಟು ತಿಳಿಸಿಕೊಡಿ. ಸ್ಪರ್ಶಮಣಿಯನ್ನೂ ಕಲ್ಲಿನಂತೆ ತುಚ್ಛವೆಂದು ಪರಿಗಣಿಸಿದಿರಿ. ಹಾಗಾದರೆ ಅದಕ್ಕಿಂತಲೂ ಬೆಲೆಬಾಳುವ ವಸ್ತು ನಿಮ್ಮಲ್ಲಿ ಇರಲೇ ಬೇಕು. ಅದೇನದು ದಯವಿಟ್ಟು ಹೇಳುವಿರಾ?” ಸಂತರು ಅದಕ್ಕೆ ಒಂದೇ ಪದದ ಉತ್ತರ ಕೊಟ್ಟರು: **“ಸಂತೋಷ.”**




**ಸಂತೋಷ ಏವ ಪುರುಷಸ್ಯ ಪರಂ ನಿಧಾನಂ** – ಸಂತೋಷವೇ ಒಬ್ಬ ಮನುಷ್ಯನಲ್ಲಿ ಇರಬಹುದಾದ ಅತ್ಯಂತ ದೊಡ್ಡ ನಿಧಿ.

(ಸಂಗ್ರಹ: ಎಲ್.ಎಸ್. ಹೆಗಡೆ, ಪುಟ್ಟನಮನೆ)